ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಆದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.			ಒಟ್ಟಿಗೆ ಹಿಡಿಯುವ ಕಡಿಮೆ ಪ್ರಮಾಣ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವೆಂಬರ್ ತಾರೀಖು		19	500	
ಡಿಟೋ	ಶ್ರೀರಂಗಪಟ್ಟಣ	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸೆಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ...	ತರೀಕೆರೆ ..	ಡಿಟೋ	ಡಿಟೋ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

೨. ಪ್ರತಿಯಂದು ಕೋಠಿಯಲ್ಲಿಯು ಹರಾಜು ನಡಿಸಲ್ಪಡುವ ಸಂದಲ್ ಲಾಟು ಮತ್ತು ಪೊತ್ತ ವೈರೆ ತಪಸೀಲು ಐಯಿಂದ ಇದೇ ಸುಮಾರಿ ಆಕ್ಕೋಸೀರು ಆಫೀಸರು ಎಳಗಾಗಿ ಫಾಮಿಷು ಮಾಡಲ್ಪಡುತ್ತೆ.

ಎಂ. ಮುತ್ತಂಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ನೋಟಸ್.

ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ಡಿಪೋದಲ್ಲಿರುವ ಅಳಲೆಕಾಯನ್ನು ಕೊಂಡುಕೊಳ್ಳುವರು 1904ನೆ ಇಸವಿ ಸೆಪ್ಟಂಬರು ತಾರೀಖು 3ರ ವರಿಗೆ ಹಾರ್ಡ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ರವರಲ್ಲಿಗೆ ದರಖಾಸ್ತುಗಳನ್ನು ಕಳುಹಿಸಬಹುದೆಂಬ ವಿಚಾರದಲ್ಲಿ ಯಲ್ಲರಿಗೂ ತಿಳಿಯತಕ್ಕ ಬಗ್ಗೆ ಆಗಸ್ಟ್ 18ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 495ನೆ ಪುಟದಲ್ಲಿ 1—8—04ರ ಮೇ ನೋಟಿಫಿಕೇಷನ್ ಪಬ್ಲಿಷ್ ಮಾಡಿರುತ್ತೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

1327 79

ಇಸ್ತಿಹಾರ್‌ನಾಮೆ.

ತಾರೀಖು 10ನೆ ಆಗಸ್ಟು 1904.

ಬೇವಿನಹಳ್ಳಿ ಫಾರೆಸ್ಟು, ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ನ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗೌರ್ನಮೆಂಟಿನಿಂದ ವಿವರಿಸಲ್ಪಟ್ಟ ಜಕ್ಕು ಬಂದಿಯುಳ್ಳ ಪ್ರದೇಶವು ನಂಬರು 890—9907 ತಾರೀಖು 27—2—6—04ನೆ ನು॥ 1904ನೆ ಇಸವಿಯ ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಜಕ್ಕು ಬಂದಿ.
ಚಿತ್ರದುರ್ಗ.	ಚಿತ್ರದುರ್ಗ, ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳು.	3,397 ಎಕರೆ ಯಾ 5·197 ಚದರ ಮೈಲುಗಳು.	ಬೇವಿನಹಳ್ಳಿ.	ಸ್ಥಳ.—ಹುಣಸಕಟ್ಟೆ ಸಮೀಪದಲ್ಲಿ ಭರ್ಮಸಾಗರ ವ ದಾವಣಗೆರೆ ರಸ್ತೆಯ ಉತ್ತರಕ್ಕೂ ಮತ್ತೂ ಜಗಳೂರು ತಾಲ್ಲೂಕಿನಲ್ಲಿರುವ ಹಾಲೆಕಾಲ್ ವ ಕರಿಅಗ್ಗಹಳ್ಳಿ ಗ್ರಾಮಗಳ ದಕ್ಷಿಣಕ್ಕೂ ಇರುವ ಜಮೀನಿನ ತುಂಡು. **ಜಕ್ಕು ಬಂದಿ.** ಉತ್ತರಕ್ಕೆ.—ಗುಡ್ಡಾಳಿನ ಸರ್ವೆ ನಂ. 103ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ಸರ್ವೆ ನಂಬರಿನ ನೈರುತ್ಯ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಹಾಲೆಕಲ್ಲಿನ ಸರ್ವೆ ನಂ. 74ರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 72ರ ದಕ್ಷಿಣ, ಪಶ್ಚಿಮ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 69ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 69, 68 ವ 67 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಲಿಂಗೇನಹಳ್ಳಿಯ ಗ್ರಾಮ ಎಲ್ಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಲಿಂಗೇನಹಳ್ಳಿ ಗ್ರಾಮದ ಪಶ್ಚಿಮ ಎಲ್ಲೆಯ ಉದ್ದಕ್ಕೂ ಬಹದೂರು ಗಟ್ಟೆಯ ಸರ್ವೆ ನಂ. 44ರ ವಾಪುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 41ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 40, 39 ವ 38 ಇವುಗಳ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯು ಅದೇ ಸರ್ವೆ ನಂಬರಿನ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 37 ವ 36 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 34ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯು ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 33ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಹೆಮ್ಮಿನಗಟ್ಟೆಯ ಸರ್ವೆ ನಂ. 54ರ ವಾಯವ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂ. 54, 53, 50 ವ 51 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನಂದಿಹಳ್ಳಿಯ

ಪೆಡ್ಯೂಲ್.

ಹಿಸ್ಸ್ಯಾಕ್ಷ.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಹದ್ದುಬಂದಿ.
ಚಿತ್ರದುರ್ಗ.	ಚಿತ್ರದುರ್ಗ, ದಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳು.	3,397 ಎಕರೆ ಯಾ 5·197 ಚದರ ಮೈಲುಗಳು.	ಬೀವಿನಹಳ್ಳಿ.	ಸರ್ವೆ ನಂ. 51ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. ತರುವಾಯ ಆಗ್ನೇಯ ದಿಕ್ಕಾಗಿ ಸುಮಾರು $2\frac{1}{8}$ ಫರ್ಲಾಂಗುಗಳ ದೂರಕ್ಕೆ ಸರ್ವೆ ನಂ. 49ರ ಮಧ್ಯೆ ಅದರ ಆಗ್ನೇಯ ಮೂಲೆಯಿಂದ ಸುಮಾರು 1 ಫರ್ಲಾಂಗಿನ ದೂರ ಅದೇ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ದಕ್ಷಿಣ ಮತ್ತು ನೈರುತ್ಯ ದಿಕ್ಕಾಗಿ ಅರಸೂರಿನ ಸರ್ವೆ ನಂ. 40ರ ಮಧ್ಯೆ ಅದೇ ಸರ್ವೆ ನಂಬರಿನಲ್ಲಿರುವ ಕೆರೆಯನ್ನು ಬಿಟ್ಟು ಸುಮಾರು 5 ಫರ್ಲಾಂಗುಗಳ ದೂರಕ್ಕೆ ಹೋಗುತ್ತದೆ. ಮತ್ತು ಅದೇ ದಿಕ್ಕಾಗಿ ಬೀವಿನಹಳ್ಳಿಯ ಸರ್ವೆ ನಂ. 60ರ ಮಧ್ಯೆ ಸರ್ವೆ ನಂ. 57ರ ವಾಯವ್ಯ ಮೂಲೆಗೆ ಸುಮಾರು $2\frac{1}{4}$ ಫರ್ಲಾಂಗುಗಳ ದೂರ ಹೋಗುತ್ತದೆ. ತರುವಾಯ ಸರ್ವೆ ನಂ. 57, 58, ಮತ್ತು 59 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಯಮ್ಮೆಹಳ್ಳಿಯ ಸರ್ವೆ ನಂ. 13 ಮತ್ತು 12 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯವ್ಯ ಮೂಲಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ವಾಯವ್ಯ ದಿಕ್ಕಾಗಿ ಸುಮಾರು $1\frac{1}{4}$ ಫರ್ಲಾಂಗುಗಳ ದೂರಕ್ಕೆ ಹುಣಸೆಕಟ್ಟೆಯ ಸರ್ವೆ ನಂ. 59ರ ಮಧ್ಯೆ ಸರ್ವೆ ನಂ. 56ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಮತ್ತು ಮುಂಡೂರಿನ ಸರ್ವೆ ನಂ. 75, 76 ಮತ್ತು 77 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ವಾಯವ್ಯ ದಿಕ್ಕಾಗಿ ಸುಮಾರು 2 ಫರ್ಲಾಂಗುಗಳ ದೂರ ಸರ್ವೆ ನಂ. 67 ಮತ್ತು 66 ಇವುಗಳ ಮಧ್ಯೆ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಕಾಟಪಹಳ್ಳಿಯ ಸರ್ವೆ ನಂ. 21ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ವಾಯವ್ಯ ದಿಕ್ಕಾಗಿ ಸರ್ವೆ ನಂ. 22ರ ಮಧ್ಯೆ ಸುಮಾರು $2\frac{1}{4}$ ಫರ್ಲಾಂಗುಗಳ ದೂರಕ್ಕೆ ಹೋಗುತ್ತದೆ. ಆಮೇಲೆ ಅದೇ ದಿಕ್ಕಾಗಿ ಸುಮಾರು 2 ಫರ್ಲಾಂಗುಗಳ ದೂರ ಸರ್ವೆ 17ರ ಮಧ್ಯೆ ಅದರ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಗುಮ್ಮನೂರಿನ ಸರ್ವೆ ನಂ. 84, 85, 88, 70 ಮತ್ತು 71 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 73 (ಸೇರಿದ) ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಉತ್ತರ ದಿಕ್ಕಾಗಿ ಸುಮಾರು 1 ಫರ್ಲಾಂಗಿನ ದೂರ ಸರ್ವೆ ನಂ. 79ರ ಮಧ್ಯೆ ಮತ್ತು ಸುಮಾರು 3 ಫರ್ಲಾಂಗುಗಳ ದೂರ ಗುಡ್ಡಾಪೂರಿನ ಸರ್ವೆ ನಂ. 103ರ ಮಧ್ಯೆ ಸರ್ವೆ ನಂ. 106ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಈಶಾನ್ಯ ದಿಕ್ಕಾಗಿ ಸುಮಾರು $1\frac{1}{4}$ ಫರ್ಲಾಂಗಿನ ದೂರ ಸರ್ವೆ ನಂ. 105ರ ಮಧ್ಯೆ ಸರ್ವೆ ನಂ. 102ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪೂರ್ವ ದಿಕ್ಕಾಗಿ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟ್ಟಾಗಿಮಾಡುವವರೆಗೆ ಮುಂಚೆ ಇಸ್ತಿಹಾರ್ನಾವು ಪ್ರಕಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಕಿರ್ದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಕಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನು ಉಟುವಾಡುವಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು, ಸದರೀ ಜಮೀನಿನಲ್ಲಿ ಹೊಸ ವ್ಯವಸಾಯವನ್ನು ಕಟ್ಟುಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ

(a) ಅತಿಕ್ರಮಪ್ರವೇಶ, ದನಕರುಗಳನ್ನು ಮೇಯಿಸುವದು, ದನಕರುಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(d) ಇನೆ ಪ್ರಕರಣದ್ದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಭಾಗ್ಯಕ್ಕಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲೀ ಕಡಿಯುವದು, (ಕತರ್ಗಾಯಿಸುವದು) ಅವರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತ್ತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು,

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸ್ಥಾಪಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ಪತ್ತಿವದು.

4. ಈ ಪ್ರಕಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇಹೆ ಅಥವಾ ಉಂಟು ಏಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕುದಾರ ಎಷ್ಟರ ಮಟ್ಟಿಗೆ ಇಹೆ ಯನ್ನತಕ್ಕ ಅಂಥಾ ವ್ಯಾಪ್ತಿಯನ್ನು ನಕ್ಷೆಸಹಿತವಾಗಿ ಮಾಡಿ ಬರಹವ್ಯೂಹಪೂರ್ವಕವಾಗಲೀ, ಅಥವಾ ರೂಬ್ರೂಬಾಗಲಿ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರಿಗೆ ಬಲೀಯವಾಗಿರುವ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಅ. ಆನಂದರಾವ್,
ಮೈಸೂರು ಕೀಮೀದು ಫಾರೆಸ್ಟು ಸೆಟಲ್‌ಮೆಂಟ್ ಆಫಿಸರು.

ಕೋಲಾರ ಜಿಲ್ಲೆಗೆ.

ಇಸ್ತಿಹಾರ್ನಾವೆ.

ತಾರೀಖು 7ನೆ ಅಗಸ್ಟು 1904 ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿರುವ ಜಮೀನುಗಳಿಗೆ ಸಂಬಂಧಪಟ್ಟ ಹಕ್ಕುಗಳ ಬಗ್ಗೆ ವಿಚಾರಣೆ ಮಾಡಿ ತೀರ್ಮಾನಗೊಳಿಸಲಿಕ್ಕಾಗಿ, ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1904ನೆ ಇಸವಿ ಸಪ್ಟಂಬರ್ ತಾ|| 30ನೆ ತಾರೀಖಿನ ದಿವಸ ಬೆ ಹಾಜರಾಗುವಂತೆ ಹವಾಜು

1. ಜೋಡಿಸ್ಕೋಣಪ್ಪನಹಳ್ಳಿ (ಇನಾಮ್ದಾರ್ ಬಾಬ್ತು ಒಂದು ವ್ಯಕ್ತಿ ಮಾತ್ರ) } ಒಕ್ಕಲು ಹೋಬಳಿ—ಮಾಲೂರು ತಾ||
2. ಜೋಡಿ ಯರ್ರಂಗಪ್ಪ ... } ಹುತ್ತೂರು ಹೋಬಳಿ—ಕೋಲಾರ ತಾ||
3. ಜೋಡಿ ಚಾಪರಹಳ್ಳಿ }

ವ್ಯಾಕಿಸಲ್ಪಟ್ಟಷ್ಟೆಂದು ಇದರಿಂದ ಸೂಚಿಸಲ್ಪಟ್ಟಿದೆ.

(ಹಿಚ್ಚಿ ತಹಕೀಲ್ ಬ್ಯೂ 1901ನೆ ಆಗಸ್ಟು 18ನೆ ಪುಟ ನಂ 33ನೆ ನಂ೫೫ ಮೈಸೂರ ಗೆಜೆಟಿನ 2ನೆ ಭಾಗದ 489-490-491ನೆ ನಂಬರಿ ಪೇಜು ನೋಡತಕ್ಕದ್ದು.)

ಸೆಟಲ್ಮೆಂಟ್ ಆಫೀಸರ್,
ಡೆಪ್ಯುಟಿ ಕಮೀಷನರ್.